International Journal of Kannada Research
www.kannadajournal.com

ISSN: 2454–5813
IJKR 2023; 9(4): 78-82
© 2023 IJKR
www.kannadajournal.com
Received: 03-09-2023
Accepted: 07-10-2023

**ನಾಗೇಂದ್ರ ಎಂ**
ಸಂಶೋಧನಾ ವಿದ್ಯಾರ್ಥಿ, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾನಿಲಯ, ಬೆಂಗಳೂರು, ಕರ್ನಾಟಕ, ಭಾರತ

**Corresponding Author:**
**ನಾಗೇಂದ್ರ ಎಂ**
ಸಂಶೋಧನಾ ವಿದ್ಯಾರ್ಥಿ, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾನಿಲಯ, ಬೆಂಗಳೂರು, ಕರ್ನಾಟಕ, ಭಾರತ

# ಆಗಮಶಾಸ್ತ್ರ ಪರಿಚಯ ಮತ್ತು ಕಾಲಘಟ್ಟ

**ನಾಗೇಂದ್ರ ಎಂ**

**DOI:** https://doi.org/10.22271/24545813.2023.v9.i4b.900

**ಪೀಠಿಕೆ**

ಹಿಂದೂಧರ್ಮ ಪ್ರಾಚೀನ ಭಾರತೀಯ ಧಾರ್ಮಿಕ ವ್ಯವಸ್ಥೆ, ನಿರ್ಣಾಯಕ ಮಾರ್ಗಸೂಚಿಗಳು ಮತ್ತು ನಿಯಮಗಳ ಮೇಲೆ ತಮ್ಮ ನಂಬಿಕೆಯನ್ನು ಆಧರಿಸಿ, ಇತರೆ ಧರ್ಮಗಳಿಗಿಂತ ಭಿನ್ನವಾಗಿ ಹಿಂದೂ ಧರ್ಮವು ತನ್ನನ್ನು ಒಂದು ಸಂಪ್ರದಾಯಕ್ಕೆ ಅಥವಾ ಒಂದೇ ವಿಧಾನಕ್ಕೆ ಸೀಮಿತಗೊಳಿಸದೇ ವಿಭಿನ್ನತೆಯಿಂದ ಶ್ರೀಮಂತವಾಗಿದೆ. ಹಿಂದೂಧರ್ಮದ ಆಚರಣೆಗಳು, ನಿಯಮಗಳು, ಆಧ್ಯಾತ್ಮಿಕತೆ ಎಲ್ಲ ಅಂಶಗಳು ಇತರ ಧರ್ಮಗಳಿಗಿಂತ ವಿಭಿನ್ನವಾಗಿವೆ. ಇಲ್ಲಿ ದೇವಾಲಯಗಳು ಮತ್ತು ಪೂಜಾ ಸ್ಥಳಗಳನ್ನು ನಿರಂಕುಶವಾಗಿ ಅಥವಾ ಕೆಲವು ಸ್ಥಳೀಯ ಕಲ್ಪನೆಗಳ ಆಧಾರದ ಮೇಲೆ ನಿರ್ಮಿಸಿರುವುದಿಲ್ಲ, ಏಕೆಂದರೆ ಆಗಮಶಾಸ್ತ್ರದಂತೆ ಎಲ್ಲವನ್ನೂ ನಿರ್ಮಿಸಲಾಗಿದೆ. ಉದಾಹರಣೆಗೆ ತೀರ್ಥಯಾತ್ರೆಗೆ ಮೂರು ಪ್ರಮುಖ ಅಂಶಗಳೆಂದರೆ ಸ್ಥಳ, ತೀರ್ಥ ಮತ್ತು ಮೂರ್ತಿ. ಅಲ್ಲಿ ಸ್ಥಳವು ದೇವಾಲಯದ ಸ್ಥಳವನ್ನು ಸೂಚಿಸುತ್ತದೆ, ತೀರ್ಥವು ದೇವಾಲಯದ ತೊಟ್ಟಿಯನ್ನು ಸೂಚಿಸುತ್ತದೆ ಮತ್ತು ಮೂರ್ತಿಯು ವಿಗ್ರಹವನ್ನು ಸೂಚಿಸುತ್ತದೆ. ಆಗಮಶಾಸ್ತ್ರದಲ್ಲಿ ಪವಿತ್ರ ಪ್ರತಿಮೆಯ ಸ್ಥಾನದಿಂದ ಹಿಡಿದು ದೇವಾಲಯವನ್ನು ನಿರ್ಮಿಸುವ ವಸ್ತುಗಳವರೆಗೆ ಚಿಕ್ಕ ವಿವರಗಳನ್ನು ಒಳಗೊಂಡಂತೆ ಪ್ರತಿಯೊಂದು ಅಂಶಕ್ಕೂ ನಿಯಮಗಳನ್ನು ಆಗಮಶಾಸ್ತ್ರದಲ್ಲಿ ಹೇಳಲಾಗಿದೆ.

ಭಾರತದಲ್ಲಿನ ದೇವಾಲಯಗಳು ವಿಶಾಲವಾದ ಜಾಗದಲ್ಲಿ ಹೇಗಿವೆ ಎಂಬುದನ್ನು ಗಮನಿಸಿದರೆ, ಸಾಂಸ್ಕೃತಿಕ ಮತ್ತು ಸ್ಥಳೀಯ ಕಲ್ಪನೆಗಳ ವ್ಯತ್ಯಾಸಗಳ ಹೊರತಾಗಿಯೂ ಆಗಮಶಾಸ್ತ್ರವನ್ನು ದೇವಾಲಯಗಳಲ್ಲಿ ಹೇಗೆ ಅಳವಡಿಸಲಾಗಿದೆ ಮತ್ತು ಅನುಸರಿಸಲಾಗಿದೆ ಎಂಬುದೇ ಒಂದು ಅದ್ಭುತ. ಭಾರತೀಯ ಪರಂಪರೆಯಲ್ಲಿ ವೇದ, ಆಗಮಗಳೆರಡಕ್ಕೂ ಸಮಾನವಾದ ಮಹತ್ವವಿದೆ. ಪ್ರಾಚೀನ ಸಂಸ್ಕೃತ ಸಾಹಿತ್ಯವು ಮೂಲಭೂತವಾಗಿ ಶೃತಿ-ಸ್ಮೃತಿಗಳೆಂದು ಎರಡು ವಿಧದಲ್ಲಿ ವಿಭಾಗಗಳಿವೆ. ಶ್ರುತಿಗೆ ವೇದ ಮತ್ತು ಆಗಮ ಎನ್ನುತ್ತಾರೆ. ಆದಿಕಾಲದ ಮಹರ್ಷಿಗಳಿಗಾದ ಸಾಕ್ಷಾತ್ಕಾರವಾದವೇ ಪ್ರಧಾನ ಅಂಶವಾಗಿದೆ. ಋಷಿ-ಮುನಿಗಳ ಮುಖೇನ ಪರಂಪರಗತವಾಗಿ ಬಂದ ಜ್ಞಾನಶಾಖೆಯೇ ಆಗಮ. ಆಗಮಶಾಸ್ತ್ರವು ಪೂಜೆ, ದೇವಾಲಯ ನಿರ್ಮಾಣ, ಆಧ್ಯಾತ್ಮಿಕತೆ ಮತ್ತು ಆಚರಣೆಗಳಿಗೆ ನಿಯಮಗಳನ್ನು ರೂಪಿಸುವ ವಿಚಾರಗಳ ಸಂಗ್ರಹವಾಗಿದೆ. ಇದು ಆಸ್ತಿಕವರ್ಗದ ನಂಬಿಕೆ ಅನೇಕ ಜನರಿಗೆ ಪ್ರಾಚೀನದಿಂದಲೂ ದಾರಿದೀಪವಾಗಿದೆ. ಆಗಮವು ದೇವನಾಗರೀ, ತಮಿಳು, ಕನ್ನಡ ಮತ್ತು ಗ್ರಂಥಲಿಪಿಗಳಲ್ಲಿ ರಚಿತವಾಗಿರುವ ಹಸ್ತಪ್ರತಿಗಳಲ್ಲಿವೆ. ಮುಖ್ಯವಾಗಿ ದೇವಾಲಯ ನಿರ್ಮಾಣ, ವಿಗ್ರಹ ರಚನೆ, ತಾತ್ವಿಕ ಸಿದ್ಧಾಂತಗಳು ಮತ್ತು ಧ್ಯಾನದ ಅಭ್ಯಾಸಗಳ ವಿಧಿ-ವಿಧಾನಗಳನ್ನು ಒಳಗೊಂಡಿದೆ.

ಇಪ್ಪತ್ತೆಂಟು ಮುಖ್ಯ ಆಗಮಗಳು ಮತ್ತು ಅನೇಕ ಉಪಾಗಮಗಳಿವೆ. ಪ್ರತಿಯೊಂದರಲ್ಲಿಯೂ ನಾಲ್ಕು ಭಾಗಗಳನ್ನು ವಿಂಗಡಿಸಲಾಗಿದೆ. ಅವುಗಳೆಂದರೆ - ಕ್ರಿಯಾಪಾದ, ಚರ್ಯಪಾದ, ಯೋಗಪಾದ ಮತ್ತು ಜ್ಞಾನಪಾದ. ಕ್ರಿಯಾಪಾದವು ಸ್ಪಷ್ಟವಾದ ನಿಯಮಗಳನ್ನು ವಿವರಿಸುತ್ತದೆ - ನಿರ್ಮಾಣ, ಶಿಲ್ಪಕಲೆ, ವಿಗ್ರಹಗಳ ಪ್ರತಿಷ್ಠಾಪನೆ ಇತ್ಯಾದಿಗಳ ನಿಯಮಗಳು. ಜ್ಞಾನಪಾದವು ದೇವಾಲಯದ ಆರಾಧನೆಯ

ತತ್ತ್ವಶಾಸ್ತ್ರ ಮತ್ತು ಆಧ್ಯಾತ್ಮಿಕತೆಯನ್ನು ತಿಳಿಸುತ್ತದೆ. ಶಿಲ್ಪ ಕಲೆಗೂ-ಆಧುನಿಕ ವಾಸ್ತುಕಲೆಗೂ, ಆಗಮೋಕ್ತ ಕಟ್ಟಡ, ದೇವಾಲಯ ನಿರ್ಮಾಣದ ನಿಯಮಗಳಿಗೂ ಇರುವ ಸಮದರ್ಶಿ ಅಂಶಗಳನ್ನು ಆಗಮಶಾಸ್ತ್ರದಲ್ಲಿ ನೋಡಬಹುದು. ಸಂಖ್ಯಾಶಾಸ್ತ್ರ, ಧರ್ಮಶಾಸ್ತ್ರ, ವಿಜ್ಞಾನ ಶಾಸ್ತ್ರ, ಸಮಾಜಶಾಸ್ತ್ರ, ತತ್ತ್ವಶಾಸ್ತ್ರ, ತರ್ಕಶಾಸ್ತ್ರ, ಭೂಗೋಳಶಾಸ್ತ್ರ ಮುಂತಾದ ಹಲವು ಶಾಸ್ತ್ರಗಳ ಸಾರವು ಆಗಮಗಳಲ್ಲಡಗಿರುವುದರಿಂದ ಆಗಮಗಳು ಅತ್ಯಂತ ಪ್ರಮುಖವಾದ ಸಾಹಿತ್ಯ ಪ್ರಕಾರಗಳಾಗಿದೆಯೆಂದು ಹೇಳಬಹುದು. ಹೀಗೆ ಅನೇಕ ಜ್ಞಾನಶಾಖೆಯನ್ನು ಹೊಂದಿರುವ ಆಗಮ ಸಾಹಿತ್ಯವು ಬೃಹತ್ ಸಾಹಿತ್ಯ ಭಂಡಾರವಾಗಿದೆ.

### ಆಗಮ ಶಬ್ದದ ನಿಷ್ಪತ್ತಿ

ಆಗಮ ಪದವು "**आङ्**" ಉಪಸರ್ಗ ಪೂರ್ವಕವಾದ "**गम् लृ-गतौ** " ಧಾತುವಿನಿಂದ ನಿಷ್ಪನ್ನಗೊಂಡಿದೆ. "**आङ्**" ಉಪಸರ್ಗದಿಂದ ಕೂಡಿ 'ಪರಂಪರೆ' ಎನ್ನುವ ಅರ್ಥವನ್ನು ಹೊಂದಿದೆ. "**ये गत्पर्थकाः धातवः ते ज्ञानार्थकाः।**" ಎಂಬ ಆಧ್ಯೋಚ್ಚಾರದಂತೆ **गम् लृ-गतौ** ಧಾತುವು ಗತ್ಯರ್ಥಕವಾದುದರಿಂದ "**गम्**" ಎಂದರೆ ಜ್ಞಾನವೆಂಬ ಅರ್ಥ ಬರುತ್ತದೆ ಈ ನಿಷ್ಪತ್ತಿಯಂತೆ **अगम** ಎಂದರೆ ಪರಂಪರೆಯಿಂದ ಬಂದ ಜ್ಞಾನವೆಂದು ಅರ್ಥೈಸಬಹುದು. ಪಾಶುಪತಸೂತ್ರದ ಕೌಂಡಿನ್ಯ ಭಾಷ್ಯದಲ್ಲಿಯೂ "**अगमो नाम आमहेश्वरात् गुरुपारम्पर्यादागतं शास्त्रम्।**" ಎಂದು ಇದೆ ಅರ್ಥದಲ್ಲಿ ಹೇಳಲಾಗಿದೆ. ಜ್ಞಾನಪರಂಪರೆಯಿಂದ ಮಹೇಶ್ವರನ ಮೂಲಕ ಹೇಳಲ್ಪಟ್ಟು ಸಂಗ್ರಹಿಸಲ್ಪಟ್ಟ ಗ್ರಂಥರಾಶಿ, ಶಾಸ್ತ್ರಗಳು ಆಗಮವೆನಿಸಿಕೊಂಡಿವೆ.

आगतं पञ्चववत्रात्तु गतं च गिरिजानने ।
मतं च वासुदेवस्य तस्मादागममुच्यते।। (ಕಾಮಿಕಾಗಮ)

"ಆ" ಎನ್ನುವುದು ಶಿವನ ಪಂಚಮುಖಗಳಿಂದ ಉತ್ಪತ್ತಿಯಾಗಿದ್ದು "ಗ" ಎನ್ನುವುದು ಗಿರಿಜೆಗೆ ಹೇಳಲ್ಪಟ್ಟಿದ್ದೆಂದೂ "ಮ" ಎನ್ನುವುದು ವಾಸುದೇವನಿಗೆ ಸಮ್ಮತವಾದೆಂದು "ಆಗಮ" ಶಬ್ದದ ಮೂರು ಅಕ್ಷರಗಳು ಸೂಚಿಸುತ್ತವೆ. "**आगतं गतं मतं चेति आगमम् ।**" ಎನ್ನುವುದು ಆಗಮ ಶಬ್ದದ ನಿರ್ವಚನವಾಗಿದೆ. ಪರಮಾತ್ಮನಿಂದ ಪ್ರಣೀತವಾಗಿ ಉಪದೇಶಿಸಲ್ಪಟ್ಟು ಪರಂಪರೆಯಿಂದ ಪರಿಷ್ಕೃತವಾಗಿ ಪ್ರಾಪ್ತವಾದುದು ಆಗಮವೆಂಬ ಶಾಸ್ತ್ರ. ಯಾವ ಜ್ಞಾನದಿಂದ ಎಲ್ಲವೂ ತಿಳಿಯಲ್ಪಡುವುದೋ **आज्ञावस्तु समत्ताच्च गम्यत इत्यागमो मतः।** ಅದನ್ನೇ ಆಗಮವೆಂದು ಪಿಂಗಳಾಮತದಲ್ಲಿ ವ್ಯಾಖ್ಯಾನಿಸಿದೆ. ಆಗಮವು ಸೃಷ್ಟಿ, ಪ್ರಳಯ, ದೇವತಾರ್ಚನ, ಸಕಲವಸ್ತು ಪ್ರಾಪ್ತಿಸಾಧನ, ಮಂತ್ರಪುರಶ್ಚರಣ, ಷಟ್ಕರ್ಮಸಾಧನ ಮತ್ತು ಧ್ಯಾನಯೋಗದ ನಾಲ್ಕು ವಿಧಗಳನ್ನು ಒಳಗೊಂಡ ವಿವರಣೆಯನ್ನು ಹೊಂದಿರಬೇಕೆಂದು ಪರಮಸಂಹಿತಾಶಾಸ್ತ್ರವು ಹೇಳುತ್ತದೆ. ಆಗಮಗಳ ಅಧ್ಯಯನದಿಂದ ಚಿತ್ತಶುದ್ದಿಯಾಗುತ್ತದೆ. ಬುದ್ಧಿಯು ವೃದ್ಧಿಸುತ್ತದೆ. ಅಹಂಕಾರವು ಅಳಿಯುತ್ತದೆ. ಮನವು ಶುದ್ದಿಯಾಗಿ ದೃಢತೆ ನೆಲೆಸುತ್ತದೆ. ಭಾವವು ವಿಕಾಸವಾಗುತ್ತದೆ.

### ಆಗಮಗಳ ಕಾಲ

ಆಗಮಗಳ ಕಾಲವನ್ನು ನಿರ್ಣಯತ್ಮಕವಾಗಿ ಹೇಳುವುದು ಕಷ್ಟಸಾಧ್ಯ. ವೇದಗಳಂತೆ ಆಗಮಗಳನ್ನು ಅನಾದಿ ಎಂದು ಹೇಳುವುದುಂಟು. ಉಪಲಬ್ಧವಾದ ಆಗಮಗಳು ಒಂದೇ ಕಾಲದಲ್ಲಿ ಸಂಗ್ರಹಿಸಲ್ಪಟ್ಟವುಗಳೆಂದು ಹೇಳುವುದು ಸಾಧ್ಯವೇ ಇಲ್ಲ. ಅವು ಪರಂಪರೆಯಲ್ಲಿ ಬೆಳೆಯುತ್ತಾ ಪರಿಷ್ಕೃತವಾಗಿ ಬಂದವುಗಳು ಎಂಬ ವಿಷಯವು ನಿರ್ವಿವಾದ. ಕೆಲವು ನಿರ್ದಿಷ್ಟವಾದ ಆಧಾರಗಳಿಂದ ಅವುಗಳ ಕಾಲದ ಸೀಮೆಯನ್ನು ನಿರ್ಧರಿಸಬಹುದಾಗಿದೆ. ಭಾಷೆಯ ದೃಷ್ಟಿಯಿಂದ ನೋಡಿದಾಗ ಅವು ವೇದಗಳ ಕಾಲಕ್ಕಿಂತ ಇತ್ತೀಚಿನ ಕಾಲಕ್ಕೆ ಸೇರಿದವುಗಳೆಂದು ಹೇಳಬಹುದಾಗಿದೆ. ಒಂದು ದೃಷ್ಟಿಯಿಂದ ಆಗಮಿಕ ಸಂಸ್ಕೃತಿಯು ವೈದಿಕ ಸಂಸ್ಕೃತಿಯ ಮುಂದುವರೆದ ಭಾಗ ಎನ್ನಬಹುದು. ಆಗಮಗಳಲ್ಲಿ ನಿರೂಪಿಸಲ್ಪಟ್ಟ ಆಚಾರ ವಿಚಾರಗಳನ್ನು ನೋಡಿದರೆ ಅವುಗಳ ಕಾಲ ಅಷ್ಟು ಪ್ರಾಚೀನವೆಂದು ಹೇಳಲಾಗದಿದ್ದರೂ ಆಗಮಿಕ ಸಂಸ್ಕೃತಿಯು ಮಾತ್ರ ಪ್ರಾಚೀನವೆಂಬುದು ಒಪ್ಪಬೇಕಾಗುತ್ತದೆ. ಇಲ್ಲಿ ಯಜ್ಞ ಯಾಗಾದಿಗಳಿಗೆ ವೇದ ಮಂತ್ರಗಳನ್ನು ಅನ್ವಯ ಮಾಡಿಕೊಂಡು ಸಿದ್ಧವಾದವು ಬ್ರಾಹ್ಮಣಗಳೆಂಬ ಭಾಗಗಳು. ಈ ಬ್ರಾಹ್ಮಣಗಳ ಕಾಲಾನುಕ್ರಮ ಪರಿವರ್ತನೆಯ ಆಗಮಗಳೆಂದು ತೋರುತ್ತದೆ[1] ಆಗಮಗಳಲ್ಲಿ ನಿರೂಪಿಸಲ್ಪಟ್ಟ ಆಚಾರ-ವಿಚಾರಗಳನ್ನು ಗಮನಿಸಿದರೆ ಅವುಗಳ ಕಾಲ ಅಷ್ಟು ಪ್ರಾಚೀನವೆಂದು ಹೇಳಲಾಗದಿದ್ದರೂ ಆಗಮಿಕ ಸಂಸ್ಕೃತಿ ಮಾತ್ರ ಪ್ರಾಚೀನವಾದದ್ದು ಎನ್ನುವ ಮಾತನ್ನು ಒಪ್ಪಿಕೊಳ್ಳಬೇಕಾಗುತ್ತದೆ.

ದೇವಮಂದಿರ ನಿರ್ಮಾಣ, ಮೂರ್ತಿಗಳ ರಚನೆ ಮತ್ತು ಪ್ರತಿಷ್ಠಾಪನೆ ಮುಂತಾದ ವಿವರಗಳು ಆಗಮಗಳಲ್ಲಿ ಸೇರಿರಬೇಕು. ಆಗಮಗಳ ಆರಂಭದ ಕಾಲವನ್ನು ಸ್ಥೂಲವಾಗಿ ನಿರ್ಧರಿಸಲು ಕೆಲವು ಆಧಾರಗಳು ದೊರೆಯುತ್ತವೆ. ಭಾಷೆಯ ದೃಷ್ಟಿಯಿಂದ ಆಗಮಗಳು ಪಾಣಿನಿಯ ನಂತರದ(ಕಿ.ಪೂ.700) ಕಾಲಕ್ಕೆ ಸೇರಿದವುಗಳು. ಆಗಮಗಳ ಆರಂಭಕಾಲ ಸುಮಾರು ಕ್ರಿ.ಪೂ. 600 ಎಂದು ಸ್ಥೂಲವಾಗಿ ನಿರ್ಧರಿಸಬಹುದು. ಕ್ರಿ.ಪೂ. 200ಕ್ಕೆ ಸೇರಿದ್ದವೆಂದು ತಿಳಿಯುವ ಮಹಾಭಾರತದಲ್ಲಿ ಉಲ್ಲೇಖಿಸಲ್ಪಟ್ಟ ಪಾಂಚರಾತ್ರಗಮೋಕ್ತ ಪೂಜಾ ಪದ್ದತಿ ಮತ್ತು ಕ್ರಿ.ಪೂ.500ಕ್ಕೆ ಸೇರಿದೆಂದು ಹೇಳಲಾದ ಭಗವದ್ಗೀತೆಯಲ್ಲಿ ಪಾಂಚರಾತ್ರಗಮೋಕ್ತ ವಾಸ್ತುದೇವ ಮಹತ್ವಗಳು[2] ಆಗಮಾರಂಭಕಾಲವನ್ನು ಸೂಚಿಸುತ್ತದೆ.

ಪಾಂಚರಾತ್ರರಿಗೆ ಇರುವ ಸಾತ್ವತ ಎನ್ನುವ ಸಂಜ್ಞೆಯು ಐತರೇಯ ಮತ್ತು ಶತಪಥಬ್ರಾಹ್ಮಣಗಳಲ್ಲಿ ಉಕ್ತವಾಗಿದೆ. ಈ ಕಾರಣದಿಂದ ಪಾಂಚರಾತ್ರಗಮಗಳು ಕ್ರಿ.ಪೂ. ಹದಿನಾಲ್ಕು

[1] ಪ್ರೊ. ಎಸ್.ಕೆ. ರಾಮಚಂದ್ರರಾವ್- ಶಿವಾಗಮ ಸೌರಭ, ಜ.ಚ.ನಿ ಅಧ್ಯಯನ ಪೀಠ ಮತ್ತು ಸಂಶೋಧನ ಸಂಸ್ಥೆ, ಬೆಂಗಳೂರು, 1986 ಮುನ್ನುಡಿ ಪುಟ 2,3

[2] ಎಂ. ಜಿ. ನಂಜುಂಡಾರಾಧ್ಯ – ಶಿವಾಗಮಸೌರಭ, ಜ.ಚ.ನಿ ಅಧ್ಯಯನ ಪೀಠ ಮತ್ತು ಸಂಶೋಧನ ಸಂಸ್ಥೆ, ಬೆಂಗಳೂರು, 1986 ಪುಟ-18

ಶತಮಾನಗಳಿಗಿಂತಲೂ[3] ಹಿಂದಿನವು ಎಂದು ತಿಳಿದುಬಂದಿದೆ. ಪಾಂಚರಾತ್ರಾಗಮಗಳಲ್ಲಿ ಶೈವಾಗಮಗಳ ಪ್ರಸ್ತಾಪವಿದೆ. ಆದರೆ ವೈಷ್ಣವಾಗಮಗಳ ಉಲ್ಲೇಖವು ಶೈವಾಗಮಗಳಲ್ಲಿ ಇಲ್ಲದಿರುವುದರಿಂದ ಶೈವಾಗಮಗಳು ವೈಷ್ಣವಾಗಮಗಳಿಗಿಂತ ಹಿಂದಿನವು ಎನ್ನುವುದಾಗಿ ಡಾ|| ಎಸ್.ಸಿ ನಂದೀಮಠರು ಅಭಿಪ್ರಾಯಿಸುತ್ತಾರೆ. ಕ್ರಿ.ಶ. 8 ಮತ್ತು 10ನೇ ಶತಮಾನಗಳ ಮಧ್ಯಭಾಗದಲ್ಲಿರುವ ಸಿದ್ಧಾಂತಶಿಖಾಮಣಿಯು ಶೈವಾಗಮಗಳಲ್ಲಿನ ವೀರಶೈವ ಭಾಗಗಳ ಸಾರಸಂಗ್ರಹವಾಗಿದೆ. ಕ್ರಿ.ಶ. 11ನೇ ಶತಮಾನದ ಶ್ರೀಕಂಠಭಾಷ್ಯ ಮತ್ತು ಶ್ರೀಕರಭಾಷ್ಯಗಳು, ಬಸವಣ್ಣ, ಚನ್ನಬಸವಣ್ಣ, ಮುಂತಾದವರ ವಚನಗಳಲ್ಲಿ ಬರುವ ಶೈವಾಗಮ ಉಲ್ಲೇಖಗಳು ಸೂಚಿಸುವಂತೆ 28 ಶೈವಾಗಮಗಳ ಬಹುಮಟ್ಟಿನ ಭಾಗಗಳು ಕ್ರಿ.ಶ. 8ನೇ ಶತಮಾನಕ್ಕಿಂತ ಹಿಂದಿನ ಕಾಲಕ್ಕೆ ಸೇರಿದವೆಂದು ಹೇಳಬಹುದು.

ಕ್ರಿ.ಶ. 16ನೇ ಶತಮಾನದಲ್ಲಿದ್ದ ಅಪ್ಪಯ್ಯದೀಕ್ಷಿತರು ತಮ್ಮ ಶಿವತತ್ವವಿವೇಕ ಮತ್ತು ಶಿವಾರ್ಕಣಿದೀಪಿಕಾ ಗ್ರಂಥಗಳಲ್ಲಿ ಶೈವಾಗಮಗಳನ್ನು ಉಲ್ಲೇಖಿಸಿದ್ದಾರೆ. ಈ ಮೂಲಕ ಆಗಮಗಳು ಕ್ರಿ.ಶ. 16ನೇ ಶತಮಾನಕ್ಕಿಂತ ಪೂರ್ವದಲ್ಲಿಯೇ ಸೈದ್ಧಾಂತಿಕ ರೂಪದಲ್ಲಿ ಬಳಕೆಯಲ್ಲಿದ್ದದ್ದು ತಿಳಿದು ಬರುತ್ತದೆ.

ಕ್ರಿ.ಶ.12ನೇ ಶತಮಾನದಲ್ಲಿದ್ದ ಬಸವಾದಿ ಶಿವಶರಣರು ತಮ್ಮ ವಚನಗಳಲ್ಲಿ ಶೈವಾಗಮವನ್ನು ಉಲ್ಲೇಖಿಸಿರುವುದರಿಂದ ಸಿದ್ಧರಾಮ, ಅಲ್ಲಮಪ್ರಭು, ಅಕ್ಕಮಹಾದೇವಿ, ಕಾಳವ್ವೆ, ಉರಿಲಿಂಗಪೆದ್ದಿ, ಆದಯ್ಯ, ಬಾಲಸಂಗಯ್ಯ ಮುಂತಾದವರು ಶ್ರುತಿ- ಸ್ಮೃತಿಗಳಿಂದ, ವೇದ-ಆಗಮಗಳಿಂದ ಸಂಸ್ಕೃತ ಶ್ಲೋಕಗಳನ್ನು ಉದಾಹರಿಸಿರುವುದನ್ನು ಕಂಡಾಗ ಶರಣರು ವೇದಾಗಮ ಶಾಸ್ತ್ರಗಳನ್ನು ತುಂಬಾ ಚೆನ್ನಾಗಿ ಅಭ್ಯಾಸಿಸಿ ಬರೆದಿರುವುದು ಸ್ಪಷ್ಟವಾಗುತ್ತದೆ. ಆದ್ದರಿಂದ ವಚನ ಸಾಹಿತ್ಯವನ್ನು ಶರಣರ ಜೀವಿತವನ್ನುನುಲಕ್ಷಿಸಿ ಹೇಳುವುದಾದರೆ ಆಗಮಗಳು ಕ್ರಿ.ಶ.12ನೇ ಶತಮಾನಕ್ಕಿಂತ ಪೂರ್ವದಲ್ಲಿದ್ದವೆಂದು ತೀರ್ಮಾನಿಸಬಹುದು. ಅಮರಕೋಶದಲ್ಲಿ ಪುರಾಣದ ವ್ಯಾಖ್ಯೆ ಬಂದಿದೆ. ಅಮರಕೋಶದ ರಚನಕಾರನಾದ ಅಮರಸಿಂಹನ ಕಾಲ ಕ್ರಿ.ಪೂ.1ನೇ ಶತಮಾನವಿರುವಿದರಿಂದ ಈ ಕಾಲಕ್ಕಿಂತಲು ಮುಂಚೆಯೇ ಕೆಲವಾದರೂ ಪುರಾಣಗಳ ರಚನೆಯಾಗಿತ್ತೆಂದು ತಿಳಿಯಬಹುದು. ಅಂತವಿಗಳಲ್ಲಿ ಸ್ಕಂದ, ಕೂರ್ಮ, ಶಿವಪುರಾಣಗಳು ಅಡಕವಾಗಿವೆ. ಇವು 1ನೇ ಶತಮಾನಕ್ಕಿಂತ ಪೂರ್ವದ್ದೆಂದು ಸ್ಪಷ್ಟವಿರುವಾಗ ಪುರಾಣೋಕ್ತ ಶಿವಾಗಮಗಳು ಪುರಾಣಪೂರ್ವದ ಕಾಲಕ್ಕೆ ಹೋಗುತ್ತವೆ.

## ಶಾಸನ, ಹಸ್ತಪ್ರತಿಗಳಲ್ಲಿ ಆಗಮಗಳ ಉಲ್ಲೇಖ

ಕಾಂಬೋಡಿಯಾದಲ್ಲಿ[4] ದೊರೆತ ಶಾಸನವೊಂದು ಸಾಹಿತ್ಯದ ಮೇಲೆ ಸಾಕಷ್ಟು ಬೆಳಕು ಚೆಲ್ಲಿದೆ. ಈ ಶಾಸನದ ಪ್ರಕಾರ ದ್ವಿತೀಯ ಜಯವರ್ಮನೆಂಬ ರಾಜನು ಜಾವದಿಂದ ಬಂದು ಕಾಂಬುಜದಲ್ಲಿ ಕ್ರಿ.ಶ.802ರಲ್ಲಿ ಅಧಿಪತಿಯಾಗಿ ತನ್ನ ಸಾಮ್ರಾಜ್ಯ ವಿಸ್ತರಿಸಿದ್ದಾಗಿ ತಿಳಿದುಬಂದಿದೆ. ಶಾಸನವು ವಿವರಿಸುವಂತೆ ಶಿವಕೈವಲ್ಯ ಎನ್ನುವ ಬ್ರಾಹ್ಮಣನು ಜಯವರ್ಮನ ರಾಜ್ಯದ ಅರ್ಚಕನಾಗಿರುತ್ತಾನೆ. ಭಾವವರ್ಮನಿಂದ ಸ್ಥಾಪಿಸಲ್ಪಟ್ಟ ಭಾವಾಪುರದ ರಾಜನು ಕ್ರಿ.ಶ. 6ನೇ ಶತಮಾನದಲ್ಲಿ ಶಿವಕೈವಲ್ಯನ ವಂಶದವರಿಗೆ ಇಂದ್ರಪುರದ ಭದ್ರಯೋಗಿ ಎನ್ನುವ ಗ್ರಾಮದಲ್ಲಿ ಭೂಮಿಯನ್ನು ಜಹೀರಾಗಿ ಕೊಟ್ಟಿದ್ದು ವಂಶಪಾರಂಪರ್ಯವಾಗಿ ಅದನ್ನು ಆ ಬ್ರಾಹ್ಮಣರು ಅನುಭವಿಸಿದ್ದರು ಎನ್ನುವುದಾಗಿ ಹೇಳಿದೆ[5] 6ನೇ ಶತಮಾನದಲ್ಲಿ ಭದ್ರಯೋಗಿ ಗ್ರಾಮದಲ್ಲಿ ಶಿವಲಿಂಗ ದೇವಾಲಯವಿತ್ತೆಂದು ಅದರ ಪೂಜೆಗಾಗಿ ಭೂಮಿಯನ್ನು ಶಿವಕೈವಲ್ಯನಿಗೆ ಕಾಣಿಕೆಯಾಗಿ ಕೊಟ್ಟು ತನ್ನ ಆಸ್ಥಾನದಲ್ಲಿ ಪ್ರಧಾನ ಅರ್ಚಕನನ್ನಾಗಿ ನೇಮಿಸಿಕೊಂಡನು. ನಂತರದಲ್ಲಿ ಮಧ್ಯಭಾರತದಿಂದ ಹಿರಣ್ಯಧಾಮ ಹೆಸರಿನ ಯೋಗಿಯು ಜಯವರ್ಮನ ಆಸ್ಥಾನಕ್ಕೆ ಬಂದು ರಾಜನ ಮೇಲೆ ಅಧ್ಯಾತ್ಮದ ಪ್ರಭಾವ ಬೀರುತ್ತಾನೆ.

ಕಂಚಿಯ ಕೈಲಾಸನಾಥ ದೇವಾಲಯದ ಒಂದು ಶಾಸನದಲ್ಲಿ[6] 28 ಆಗಮಗಳ ಹೆಸರು ಉಲ್ಲೇಖವಾಗಿದೆ. ಪಲ್ಲವ ಅರಸನಾದ ರಾಜಸಿಂಹವರ್ಮನು ಶೈವ ಮತಾನುಯಾಯಿ ಆಗಿದ್ದನೆನ್ನುವುದು ಇದೇ ಶಾಸನದಿಂದ ತಿಳಿದಿದೆ. ಪಲ್ಲವರ ಕಾಲವೂ ಕ್ರಿ.ಶ. 6-7ನೇ ಶತಮಾನ ಆಗಿರುವುದರಿಂದ ಈ ಕಾಲದ ಸಂದರ್ಭದಲ್ಲೇ ಶಿವಾಗಮಗಳು ಪ್ರಸಿದ್ಧವಾಗಿದ್ದವು. ಕುಶಾನ, ತ್ರೈಕೋಟ, ಭವನಾಗ ಮೊದಲಾದ ಪ್ರಾಚೀನ ರಾಜ ಮನೆತನಗಳು ಶೈವ ಮತದ ಬೆಳವಣಿಗೆಗೆ ಪ್ರೋತ್ಸಾಹವನ್ನು ನೀಡಿವೆ. ಕುಶಾನ ವಂಶದ ವಾಮ್ ಕುಡಾಸ್ಮಿಸ್[7] ಎನ್ನುವವನು ತನ್ನ ಬಂಗಾರದ ನಾಣ್ಯಗಳ ಮೇಲೆ ಶಿವನ ಮೂರ್ತಿಯನ್ನು ಕೆತ್ತಿಸಿ ಮಹೇಶ್ವರ ಅಕ್ಷರಗಳನ್ನು ಬರೆಸಿರುವನು. ಈತನು ಕ್ರಿಸ್ತಶಕ 1ನೇ ಶತಮಾನದಲ್ಲಿದ್ದನೆಂದು ಇತಿಹಾಸಜ್ಞರು ಅಭಿಪ್ರಾಯಸುತ್ತಾರೆ.

ನೇಪಾಳದ ದರ್ಬಾರ್ ಗ್ರಂಥಾಲಯದಲ್ಲಿ ಇರುವ ಬ್ರಹ್ಮಯಾಮಾಲ ಗ್ರಂಥದಲ್ಲಿರುವ 39ನೇ ಅಧ್ಯಾಯವು ತಂತ್ರಶಾಸ್ತ್ರ ಸಾಹಿತ್ಯದ ಸ್ತೋತ್ರಗಳು, ಪೀಠಗಳು, ಅಮ್ನಾಯಗಳನ್ನು ತಿಳಿಸುತ್ತಿದ್ದು, ಈ ಕೃತಿಗೆ ಸ್ರೋತನಿರ್ಣಯ[8] ಎನ್ನುವ ಇನ್ನೊಂದು ಹೆಸರಿರುವುದು ಸ್ಪಷ್ಟವಾಗಿದೆ. ಇದೇ ಗ್ರಂಥಾಲಯದಲ್ಲಿ ದೊರೆತ ನಿಃಶ್ವಾಸತಂತ್ರ ಸಂಹಿತೆ ಎನ್ನುವ ಹಸ್ತಲಿಖಿತ ಪ್ರತಿಯುಂಟು. ಇದನ್ನು ಲಿಪಿಶಾಸ್ತ್ರದ ಆಧಾರದ ಮೇಲೆ ಕ್ರಿ.ಶ 8ನೇ ಶತಮಾನದಲ್ಲಿ ಪ್ರತಿ ಮಾಡಲಾಗಿದೆಯೆಂದು ನಂಬಲಾಗಿದೆ. ಮೂಲಸೂತ್ರ, ಉತ್ತರಸೂತ್ರ, ನಯಸೂತ್ರ ಮತ್ತು ಗುಹ್ಯಸೂತ್ರಗಳನ್ನು ಅನುಸರಿಸಿ 18 ಶಿವ ಶಾಸ್ತ್ರಗಳನ್ನು ವಿಸ್ತರಿಸಲಾಗಿದೆ. ಬ್ರಹ್ಮಯಾಲ ಗ್ರಂಥದಲ್ಲಿಯೂ ಈ 18 ಕೃತಿಗಳ ಉಲ್ಲೇಖವಿದೆ. ಕೇಂಬ್ರಿಡ್ಜ್ ವಿಶ್ವವಿದ್ಯಾಲಯದ

[3] ಮಲ್ಲಾದಿ ಸೂರ್ಯನಾರಯಣ ಶಾಸ್ತ್ರಿ – ಸಂಸ್ಕೃತ ವಾಙ್ಮಯ ಚರಿತ್ರೆ, ಆಂಧ್ರ ವಿಶ್ವಕಲಾ ಪರಿಷತ್ 1976, ಪುಟ 71

[4] ಎಂ. ಜಿ. ನಂಜುಂಡಾರಾಧ್ಯ – ಶಿವಾಗಮಸೌರಭ, ಜ.ಚ.ನಿ ಅಧ್ಯಯನ ಪೀಠ ಮತ್ತು ಸಂಶೋಧನ ಸಂಸ್ಥೆ, ಬೆಂಗಳೂರು, 1986 ಕಾಂಬೋಡಿಯ ಶಾಸನ ಪುಟ-25

[5] ಎಂ. ಜಿ. ನಂಜುಂಡಾರಾಧ್ಯ – ಶಿವಾಗಮಸೌರಭ, ಜ.ಚ.ನಿ ಅಧ್ಯಯನ ಪೀಠ ಮತ್ತು ಸಂಶೋಧನ ಸಂಸ್ಥೆ, ಬೆಂಗಳೂರು, 1986 ಪುಟ-26

[6] ಡಾ. ಆರ್.ಸಿ. ಹಿರೇಮಠ – ಮಹಾಯಾತ್ರೆ ಕನ್ನಡ ವಿಶ್ವವಿದ್ಯಾಲಯ, ಹಂಪಿ 1997, ಪುಟ 59

[7] ಡಾ. ಆರ್.ಸಿ. ಹಿರೇಮಠ – ಮಹಾಯಾತ್ರೆ ಕನ್ನಡ ವಿಶ್ವವಿದ್ಯಾಲಯ, ಹಂಪಿ 1997, ಪುಟ 69

[8] ಎಂ. ಜಿ. ನಂಜುಂಡಾರಾಧ್ಯ – ಶಿವಾಗಮಸೌರಭ, ಜ.ಚ.ನಿ ಅಧ್ಯಯನ ಪೀಠ ಮತ್ತು ಸಂಶೋಧನ ಸಂಸ್ಥೆ, ಬೆಂಗಳೂರು, 1986 ಪುಟ-27

ಗ್ರಂಥಾಲಯದಲ್ಲಿ83 ಕೆಲವು ಆಗಮಗಳ ತಾಳೆಯೋಲೆಯ ಗ್ರಂಥಗಳಿದ್ದು ಅವುಗಳಲ್ಲಿ ಕೆಲವನ್ನು ಕ್ರಿ.ಶ 7ನೇ ಶತಮಾನದಲ್ಲಿ ಪ್ರತಿ ಮಾಡಿಕೊಂಡು ಉಲ್ಲೇಖವಿದೆ.

### ಆಗಮಗಳ ಸಂಖ್ಯೆ

ಆಗಮಗಳ ಇತಿಹಾಸವನ್ನು ಅವಲೋಕಿಸಿದಾಗ ಆಗಮಗಳು, ಉಪಗಮಗಳು ಮತ್ತು ಅವುಗಳ ಶ್ಲೋಕಸಂಖ್ಯೆಯು ಅಪರಿಮಿತವಾಗಿರುವುದು ಕಂಡುಬಂದಿದೆ. ಶೈವಾಗಮಗಳು 28 ಇದ್ದವು ಎನ್ನುವುದಕ್ಕೆ ಹಲವಾರು ಪ್ರಮಾಣಗಳಿದ್ದು ಯಾವುದೇ ಸಂದೇಹಗಳು ಮೂಡುವುದಿಲ್ಲ. ಸಿದ್ಧಾಂತ ಶಿಖಾಮಣಿಯಲ್ಲಿ ಶಿವಯೋಗಿ ಶಿವಾಚಾರ್ಯರು ಹೇಳುವಂತೆ ಪ್ರಥಮವಾಗಿ ಕಾಮಿಕಾಗಮವು ಹಾಗೆಯೇ ಕೊನೆಯಲ್ಲಿ ವಾತುಲಗಮವಿದೆ. ಕಾರಣಾಗಮ, ಸುಪ್ರಭೇದಾಗಮ, ವಿವೇಕ ಚಿಂತಾಮಣಿ, ಶಿವತತ್ವರತ್ನಾಕರ ಮೊದಲಾದ ಗ್ರಂಥಗಳಲ್ಲಿ ಆಗಮಗಳು 28 ಎಂದು ಹೇಳಲ್ಪಟ್ಟಿದೆ. ಕಾಮಿಕ, ಯೋಗಜ, ಅಚಿಂತ್ಯ, ಕಾರಣ, ಅಜಿತ, ದೀಪ್ತ, ಸೂಕ್ಷ್ಮ, ಸಹಸ್ರ, ಅಂಶುಮಾನ್, ಸುಪ್ರಭೇದ, ವಿಜಯ, ನಿಶ್ವಾಸ, ಸ್ವಾಯಂಭುವ, ಅನಲ, ವೀರ, ರೌರವ, ಮುಕುಟ, ವಿಮಲ, ಚಂದ್ರಜ್ಞಾನ, ಬಿಂಬ, ಪ್ರೋದ್ಗೀತ, ಲಲಿತ, ಸಿದ್ಧ, ಶರೋಕ್ತ, ಸಂತಾನ, ಪರಮೇಶ್ವರ, ಕಿರಣ, ವಾತುಳ, ಎಂಬುದಾಗಿ ಇಪ್ಪತ್ತೆಂಟು ಆಗಮಗಳು. ಇವು ಸದ್ಯೋಜಾತ, ವಾಮದೇವ, ಅಘೋರ, ತತ್ಪುರುಷ, ಈಶಾನ ಮುಖಗಳಿಂದ ಹುಟ್ಟಿದವೆಂದು ಹೇಳುವುದುಂಟು.

### ಉಪತಂತ್ರಗಳಲ್ಲಿ ಕಂಡುಬರುವ ವ್ಯತ್ಯಾಸ

ಶೈವಾಗಮಗಳ, ಉಪ ಆಗಮಗಳ ಸಂಖ್ಯೆಯ ವಿಷಯವಾಗಿ ಹೆಸರನ್ನು ಉಚ್ಚರಿಸುವ ಸಂದರ್ಭಗಳಲ್ಲಿ ಅಭಿಪ್ರಾಯ ಬೇದಗಳಿವೆ. ಉಪಾಗಮಗಳ ಸಂಖ್ಯೆ 198 ಎಂದೂ, 204 ಎನ್ನುವುದಾಗಿಯೂ, 207 ಕೆಲವೆಡೆ, 208 223 ಮುಂತಾಗಿ[9] ಹೇಳಲಾಗುತ್ತದೆ. ಶೈವಾಗಮಗಳ ಕುರಿತಾಗಿ ಸುಧೀರ್ಘ ಅಧ್ಯಯನ ನಡೆಸಿರುವ ಡಾ. ಎಂ.ಶಿವಕುಮಾರಸ್ವಾಮಿಯವರು ಉಪ ಆಗಮಗಳ ಸಂಖ್ಯೆ 208 ಎಂತಲೇ ಪ್ರತಿಪಾದಿಸುತ್ತಾರೆ. 1961ರಲ್ಲಿ ಪಾಂಡಿಚೇರಿಯ ಫ್ರೆಂಚ್ ಇಂಡಾಲಜಿ ಸಂಸ್ಥೆಯವರು ಪ್ರಕಟಿಸಿದ ರೌರಾಗಮದಲ್ಲಿ ಉಪತಂತ್ರಗಳ ಸಂಖ್ಯೆ 208 ಎಂದಿದೆ. ಇದು ಕೆಲವು ಪುಸ್ತಕಗಳಲ್ಲಿ 207 ಆಗಿದೆ. ಶಿವಾಗಸೌರಭ ಪುಸ್ತಕವನ್ನು ಸಂಪಾದಿಸಿರುವ ಸಂಪಾದಕ ಮತ್ತು ಆಸ್ಥಾನ ವಿದ್ವಾನರಾಗಿದ್ದ ಎಂ.ಜಿ.ನಂಜುಂಡಾರಾಧ್ಯರು ಉಪಸಂಹಿತಗಳ ಸಂಖ್ಯೆ 208 ಎನ್ನುವುದಾಗಿ ಹೇಳುತ್ತಾರೆ. ಇದನ್ನು ಶಿವಾಚಾರ್ಯರಾದ ಡಾ ಶ್ರೀ.ಜ.ಚ.ನಿ ಯವರು ಆಗಮ ಆಯಾಮ ಲೇಖನದಲ್ಲಿ 208 ಉಪ ಆಗಮಗಳೆಂದು[10] ಪುಷ್ಟೀಕರಿಸಿದ್ದಾರೆ. ಆಗಮಗಳ ಹೆಸರುಗಳು ಕೆಲವೆಡೆ ಅಂಶುಮಾನ್, ಅಂಶುಮತ್ ಎಂದು ಭೇದವಿದೆ. ಆಗ್ನೇಯ ಆಗಮಕ್ಕೆ ಅನಲ ಎನ್ನುವುದಾಗಿಯೂ ಬಿಂಬ ಆಗಮಕ್ಕೆ ಮುಖಬಿಂಬವೆನ್ನುವ, ಬಿಂದುಸಿದ್ಧಿ ಹೆಸರುಗಳು, ವಾತುಲ ಆಗಮವು ವಾತುಳ ಎನ್ನುವುದಾಗಿಯೂ, ಅಜತಾಗಮ ಅರ್ಜಿತ ಎಂದಾಗಿದೆ. ಸುಪ್ರಭ-ಸುಪ್ರಭೇದ, ಚಂದ್ರಜ್ಞಾನಕ್ಕೆ ಚಂದ್ರಕಾಶವೆಂತಲೂ ಅಲ್ಪ ವ್ಯತ್ಯಾಸಗಳನ್ನು ಕಾಣಬಹುದಾಗಿದೆ. ಉಪಾಗಮಗಳ ಉಲ್ಲೇಖ ಸಂದರ್ಭಗಳಲ್ಲಿ ಈ ವ್ಯತ್ಯಾಸಗಳು ಪುಸ್ತಕದಿಂದ ಪುಸ್ತಕಕ್ಕೆ ಅಧಿಕ ಏರುಪೇರಾಗಿರುವುದನ್ನು ಕಾಣಬಹುದು. ಕಾಮಿಕಾಗಮದ ಉಪಗಾಮವಾದ ವಕ್ತ್ರಾರ ತಂತ್ರವೂ, ಉತ್ತರ ತಂತ್ರವಾಗಿಯೂ ಯೋಗಜಾಗದ ಉಪಾಗಮಗಳಲ್ಲಿ ತಾರ, ವೀಣಾಖೋತ್ತರ, ಆತ್ಮಯೋಗ, ಸುಧಾ, ಸಂತತಿ ಎನ್ನುವ ಹೆಸರುಗಳಲ್ಲಿ ವೀಣಾ, ಶಿವೋತ್ತರ, ಸೂತ, ಸಂತಾನ, ಆತ್ಮಯೋಗವೆನ್ನುವ ವ್ಯತ್ಯಾಸಗಳಿವೆ. ಕಾರಣಾಗಮಕ್ಕೆ ಒಂದೆಡೆ 6 ಉಪಾಗಮಗಳಿದ್ದರೆ ಇನ್ನೊಂದಡೆ 7 ತಂತ್ರಗಳೆಂದು ಹೇಳಲ್ಪಟ್ಟಿದೆ. ಸುಪ್ರಬೇದಕ್ಕೆ ಒಂದೆಡೆ ಅಭೇದ ತಂತ್ರವೆನ್ನುವ ಉಪ ಆಗಮವಿದ್ದು ಇನ್ನೊಂದಡೆ ಉಪತಂತ್ರಗಳಿಲ್ಲ ಎನ್ನುವ ಸ್ಪಷ್ಟೋಕ್ತಿ ಗೋಚರವಾಗುತ್ತದೆ.

### ಸಂಬಂಧಪಂಚಕಗಳು

ಆಗಮದ ಪ್ರತಿಯೊಂದು ಪಾದದಲ್ಲಿಯೂ ಒಂದು ಪ್ರಕರಣವು ಮುಗಿದು ಮತ್ತೊಂದು ಪ್ರಕರಣವು ಪ್ರಾರಂಭವಾಗುವಲ್ಲಿ ಪಂಚವಿಧ ಸಂಬಂಧಗಳ ವಿಚಾರವನ್ನು ಹೇಳಿದ್ದು ಅವು ಪೌಷ್ಕರಾಗಮದಲ್ಲಿ[11] ದೊರೆತಿವೆ.

1. ತಂತ್ರವಸ್ತುವಿನ ಸಂಬಂಧವು
2. ಸೂತ್ರಸಂಬಂಧವು
3. ವಾಕ್ಯಸಂಬಂಧವು
4. ಪ್ರಕರಣ ಸಂಬಂಧವು
5. ಪಟಲಸಂಬಂಧವು ಎಂಬುದಾಗಿ ಪಂಚಸಂಬಂಧಗಳು ತಂತ್ರ (ಆಗಮ) ಶಾಸ್ತ್ರಗಳಲ್ಲಿ ಅರಿಯಲ್ಪಡುವ ಪತಿ ಮೊದಲಾದ ಪದಾರ್ಥಗಳ ಲಕ್ಷಣ ವಿವೇಚನ ಸಂದರ್ಭದವು ತಂತ್ರವಸ್ತುವೆಂದೂ, ಆ ಪದಾರ್ಥಗಳ ಸ್ವರೂಪವನ್ನು ಸೂತ್ರರೂಪಕವಾಗಿ ನಿರ್ದೇಶನ ಮಾಡುವುದು ಸೌತ್ರವೆಂದು ಅರ್ಥವತ್ತಾದ ವಾಕ್ಯಗಳಿಂದ ನಿರೂಪಿಸುವುದು ವಾಕ್ಯಾತ್ಮಕವೆಂದು ಆ ವಾಕ್ಯಗಳು ಆಯಾ ಪಾದಗಳಲ್ಲಿ ಪ್ರಾಸಂಗಿಕವಾಗಿರುವುದು ಪ್ರಾಕರಣೀವೆಂದೂ ಹಿಂದಿನ ಪಟಲದಲ್ಲಿ ಸೂಚಿಸಲ್ಪಟ್ಟುದ್ದನ್ನು ಅನುಸರಿಸಿಯೇ ವಿಷಯವನ್ನು ಮುಂದುವರಿಸುವುದು ಪಾಟಲಿಕವೆಂದೂ ಸಂಬಂಧಪಂಚಕದ ಪರಿಯನ್ನು ಅರಿಯತಕ್ಕದ್ದು. ಶಿವಪ್ರಣೀತ ಪಾಶುಪತ ಶಾಸ್ತ್ರವು ಶೈವ ಸಿದ್ಧಾಂತವಾಗಿದ್ದು ಶಿವನ ಸರ್ವೋತ್ತಮತತ್ವವನ್ನು ಸಾರುತ್ತದೆ. ಶೈವಾ, ಪಾಶುಪತ, ಕಾಪಾಲಿಕ ಮತ್ತು ಕಾಳಾಮುಖ ಎನ್ನುವ ನಾಲ್ಕು ಶಾಖೆಗಳನ್ನು ಹೊಂದಿರುವ ಶೈವ ಸಿದ್ಧಾಂತಕ್ಕೆ ತಂತ್ರವೆನ್ನುವುದಾಗಿಯೂ ಕರೆಯುತ್ತಾರೆ. ಕಾಮಿಕಾದಿ ವಾತುಲಾದವರೆಗಿನ 28 ಆಗಮಗಳಿಗೆ 208 ಉಪಾಗಮಗಳಿರುವುದು ಅವೆಲ್ಲಕ್ಕೂ ಭೋದ್ಧರಾರು ಮತ್ತು

[9] ಡಾ. ಆರ್.ಸಿ. ಹಿರೇಮಠ – ಮಹಾಯಾತ್ರೆ ಕನ್ನಡ ವಿಶ್ವವಿದ್ಯಾಲಯ, ಹಂಪಿ 1997, ಪುಟ 34

[10] ಎಂ. ಜಿ. ನಂಜುಂಡಾರಾಧ್ಯ – ಶಿವಾಗಮಸೌರಭ, ಜ.ಚ.ನಿ ಅಧ್ಯಯನ ಪೀಠ ಮತ್ತು ಸಂಶೋಧನ ಸಂಸ್ಥೆ, ಬೆಂಗಳೂರು, 1986 ಪುಟ-9

[11] अनन्तरं यत्पटलात्सूत्रं तन्त्रे प्रवर्तते। वक्तव्यस्तस्य सम्बन्धः पञ्चधा समवास्थितः ।।

तन्त्रवस्तुत्रयात्सूत्राद्वाक्याप्रकरणात्तथा पटलोच्चेति ।। ಪೌಷ್ಕರಾಗಮ, ಆಗಮ ಪರಿಜ್ಞಾನ 32 ರಿಂದ ಉಧೃತ.

ಶ್ರೋತ್ರರಾರು ಇರುವುದು ವಿವಿಧ ಪ್ರಕಟಿತ ಆಗಮ ಸಾಹಿತ್ಯದಿಂದ ತಿಳಿದುಬಂದಿದೆ. ಆಗಮಗಳಲ್ಲಿ ಕ್ರಿಯಾಪದ, ಚರ್ಯಪಾದ, ಯೋಗಪಾದ ಮತ್ತು ವಿದ್ಯಾಪಾದವೆನ್ನುವ ನಾಲ್ಕು ಅಂತರ್ವಿಭಾಗಗಳಿವೆ. ಆಗಮಗಳ ವಿಷಯಗಳು ಶ್ರೀಕರಭಾಷ್ಯ, ಕ್ರಿಯಾಸಾರಗಳಲ್ಲೂ ಚರ್ಚೆಯಾಗಿದ್ದು ಆಗಮೋಕ್ತ ಶೈವರ ಆಚಾರ ವಿಚಾರಗಳನ್ನು ಈ ಗ್ರಂಥಗಳು ತಿಳಿಸಿಕೊಡುತ್ತಿದ್ದು ಮಹಾಸಾಗರದಂತಿದೆ.

## ಗ್ರಂಥಸೂಚಿ


1. ಶಿವಾಗಮಸೌರಭ, ಎಂ. ಜಿ. ನಂಜುಂಡಾರಾಧ್ಯ 1986
2. ಸಂಸ್ಕೃತ ವಾಙ್ಮಯ ಚರಿತ್ರೆ, ಮಲ್ಲಾದಿ ಸೂರ್ಯನಾರಯಣ ಶಾಸ್ತ್ರಿ – 1976
3. ಮಹಾಯಾತ್ರೆ ಕನ್ನಡ ವಿಶ್ವವಿದ್ಯಾಲಯ, ಡಾ. ಆರ್.ಸಿ. ಹಿರೇಮಠ -1997
4. ರುದ್ರಪ್ಪ,ಶೈವದರ್ಶನ,ಮೈಸೂರು. 1973.
5. A Descriptive Catalouge of the Sanskrit Manuscripts in the G.O.M.L. Madras, (Ed.) M. Rangacarya. Govt. Press. 1911.
6. Tantra: Its Mystic and Scientific Basis, Lalan Prasad Singh, Concept Publishing Company Pvt Ltd, 2010.